# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

## ಭಾಗ ೧೯

## ದಕ್ಷಿಣ ಅಮೆರಿಕೆಯ ಒಂದು ನಗರದಲ್ಲಿ

**ಶ**ನಿವಾರ, ಜನವರಿ ೧೩, ೧೮೯೪. ಸ್ವಾಮಿ ವಿವೇಕಾನಂದರು ಮೆಂಫಿಸ್ ನಗರಕ್ಕೆ ಆಗಮಿಸಿದರು. ೧೯ನೆಯ ಶತಮಾನದ ಒಕ್ಕೂಟ ಎನ್ನುವ ಸಂಸ್ಥೆಯ ಸದಸ್ಯರು ಸ್ವಾಮೀಜಿಯವರನ್ನು ಅಹ್ವಾನಿಸಿದ್ದರು. ಅವರಲ್ಲಿ ಕೆಲವರು ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರೆಲ್ಲರೂ ಈ 'ಹಿಂದೂ ಸಂನ್ಯಾಸಿ' ಯಿಂದ ಬಹಳಷ್ಟು ಪ್ರಭಾವಿತರಾಗಿದ್ದರು. ಈ ರೀತಿಯಲ್ಲಿ ಅಮೆರಿಕೆಯ ಹಲವಾರು ಸಂಘಸಂಸ್ಥೆಗಳು ಸ್ವಾಮೀಜಿಯವರನ್ನು ಭಾಷಣ ನೀಡುವಂತೆ ಆಹ್ವಾನಿಸುತ್ತಿದ್ದವು.

ಮೆಂಫಿಸ್ ನಗರದಲ್ಲಿ ಸ್ವಾಮಿ ವಿವೇಕಾನಂದರ ಆತಿಥೇಯರಾಗಿದ್ದವರೆಂದರೆ ಹು ಎಲ್. ಬ್ರಿನ್‌ಕ್ಲೆ ಅವರು. ಸ್ವಾಮೀಜಿ ಮೆಂಫಿಸ್ಸಿಗೆ ಬಂದಿಳಿದ ದಿನದ ಸಾಯಂಕಾಲದಂದೇ ಅವರ ಗೌರವಾರ್ಥವಾಗಿ ಸ್ವಾಗತಕೂಟವೊಂದನ್ನು ಏರ್ಪಡಿಸಿದ್ದರು. ಮರುದಿನ ಅಂದರೆ ಜನವರಿ ೧೪, ೧೮೯೪ರಂದು ಸ್ವಾಮೀಜಿ ಒಬ್ಬ ಸ್ಥಳೀಯ ಪತ್ರಕರ್ತನಿಗೆ ಸಂದರ್ಶನವೊಂದನ್ನು ನೀಡಿದರು. ಈ ಸಂಭಾಷಣೆಯು ಜನವರಿ ೧೫ರಂದು 'ಮೆಂಫಿಸ್ ಕಮರ್ಷಿಯಲ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ವಿಶಿಷ್ಟ ಸಂವಾದದ ಕೆಲವು ಮುಖ್ಯ ಅಂಶಗಳು ಹೀಗಿವೆ:

''ಸ್ವಾಮಿ ವಿವೇಕಾನಂದರು ಮೆಂಫಿಸ್ ನಗರ ಕಂಡ ಅತ್ಯಂತ ಆಸಕ್ತಿಕರವಾದ ವ್ಯಕ್ತಿಗಳಲ್ಲಿ ಅಗ್ರಗಣ್ಯರು. ಅವರು ಹಿಂದೂ ಸಂನ್ಯಾಸಿ ಸಂಪ್ರದಾಯಕ್ಕೆ ಸೇರಿದವರು. ಅವರು ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ವಿಶಿಷ್ಟ ಅತಿಥಿಯಾಗಿದ್ದರು. ಇವರು ದೂರದ ನಾಡಿನಿಂದ ಬಂದಿದ್ದಾರೆ. ಪುರಾತನ ಧರ್ಮವೊಂದರ ಪ್ರತಿನಿಧಿಯಾಗಿದ್ದಾರೆ. ಸರ್ವಧರ್ಮ ಸಮ್ಮೇಳನದಲ್ಲಿ ಅತ್ಯಂತ ಉತ್ತಮವಾದ ಭಾಷಣಗಳನ್ನು ಮಾಡಿದರು.

''ವಿವೇಕಾನಂದರದು ಅದ್ಭುತವಾದ ವ್ಯಕ್ತಿತ್ವ. ವರದಿಗಾರನು ಅಮೆರಿಕದ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ಕೇಳಿದಾಗ, ಅವರು ಹೇಳಿದರು: 'ಅಮೆರಿಕಾ ದೇಶವು ನನ್ನ ಮೇಲೆ ಬಹಳ ಸಕಾರಾತ್ಮಕ ಪ್ರಭಾವವನ್ನು ಉಂಟುಮಾಡಿದೆ. ಅದರಲ್ಲಿಯೂ ಇಲ್ಲಿನ ಮಹಿಳೆಯರನ್ನು ಕಂಡು ನನಗೆ ಅಚ್ಚರಿ ಉಂಟಾಯಿತು. ಇದಲ್ಲದೆ, ಅಮೆರಿಕೆಯಲ್ಲಿ ಬಡತನವು ಇಲ್ಲದೇ ಇರುವುದು ನನ್ನ ಗಮನಕ್ಕೆ ಬಂದಿತು.'

''ನಂತರ ಸಂಭಾಷಣೆಯು ಧರ್ಮಗಳ ಕಡೆಗೆ ತಿರುಗಿತು. ಸರ್ವಧರ್ಮ ಸಮ್ಮೇಳನವು ಧಾರ್ಮಿಕ ಭಾವನೆಗಳನ್ನು ಉದಾರಗೊಳಿಸುವ ಉತ್ತಮ ಕಾರ್ಯವನ್ನು ಮಾಡಿದೆ. ಈ ನಿಟ್ಟಿನಲ್ಲಿ ಇದು ಮಾನವತೆಗೆ ಮಾಡಿರುವ ಉಪಕಾರ ಬಹಳ ದೊಡ್ಡದು ಎಂದು ವಿವೇಕಾನಂದರು ಅಭಿಪ್ರಾಯಪಡುತ್ತಾರೆ.''

ಅನಂತರ, ವರದಿಗಾರನು ಒಬ್ಬ ಮನುಷ್ಯನು ಸತ್ತ ನಂತರ ಏನಾಗುತ್ತಾನೆ ಎಂಬ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಏನು ಕೇಳಿದನು. ಇದಕ್ಕೆ ಸ್ವಾಮಿ ವಿವೇಕಾನಂದರು ಹೇಳಿದರು: ''ಒಳ್ಳೆಯ ವ್ಯಕ್ತಿಯೊಬ್ಬ ಮರಣಹೊಂದಿದರೆ, ಅವನಿಗೆ ಖಂಡಿತ ಒಳ್ಳೆಯ ಗತಿಯಾಗುತ್ತದೆ. ಒಬ್ಬನು ನಾಸ್ತಿಕನಾಗಿದ್ದರೂ ಪರವಾಗಿಲ್ಲ ; ಅವನು ಸದ್ಗತಿಯನ್ನೇ ಹೊಂದುತ್ತಾನೆ. ಇದೇ ನಮ್ಮ ಧರ್ಮದ ಅಭಿಪ್ರಾಯ. ನಾವು ಎಲ್ಲ ಧರ್ಮಗಳೂ ಶ್ರೇಷ್ಠವಾದುವೇ ಎಂದು ನಂಬುತ್ತೇವೆ. ಈ ಧರ್ಮಗಳನ್ನು ಪಾಲಿಸುವವರು ಪರಸ್ಪರ ಘರ್ಷಣೆಯಲ್ಲಿ ತೊಡಗಬಾರದು.''

ಹಾಗೆಯೇ ಸ್ವಾಮೀಜಿಯವರು ಪವಾಡಗಳ ಬಗ್ಗೆ ಮಾತನಾಡಿದರು. ''ನಾವು ಪವಾಡಗಳನ್ನು ನಂಬುವುದಿಲ್ಲ. ಎಲ್ಲ ಬಗೆಯ ವಿಚಿತ್ರಕರವಾದ ಸಂಗತಿಗಳು ಕೂಡ ನಿಸರ್ಗ ನಿಯಮಗಳ ಪ್ರಕಾರವೇ ನಡೆಯುತ್ತವೆ ಎಂದು ನಂಬುತ್ತೇವೆ.'' ಅನಂತರ ಸ್ವಾಮೀಜಿ ಹಠಯೋಗದ ಬಗ್ಗೆ ವಿಸ್ತಾರವಾಗಿ ಮಾತನಾಡಿದರು. ಒಬ್ಬ ಮಹಿಳೆ ವಿವೇಕಾನಂದರು ಸಂನ್ಯಾಸ ದೀಕ್ಷೆಯನ್ನು ಪಡೆದುಕೊಳ್ಳುವ ಮುಂಚೆ ಸಜೀವ ಹೂತುಕೊಂಡಿದ್ದರೇ ಎಂದು ಪ್ರಶ್ನಿಸಿದಳು. ಇದಕ್ಕೆ ಸ್ವಾಮೀಜಿ ಹೇಳಿದರು: ''ಇಂಥ ವಿಚಿತ್ರ ಸಂಗತಿಗಳಿಗೂ ಧರ್ಮಕ್ಕೂ ಏನು ತಾನೇ ಸಂಬಂಧ? ಇವುಗಳಿಂದ ಮನುಷ್ಯನು ಪರಿಶುದ್ಧನಾಗುತ್ತಾನೆಯೆ? ನಿಮ್ಮ ಬೈಬಲ್ಲಿನಲ್ಲಿ ಬರುವ ಸೈತಾನನು ಶಕ್ತಿಶಾಲಿ; ಆದರೆ ಪರಿಶುದ್ಧತೆಯನ್ನು ಹೊಂದಿರುವ ದೇವರಿಗಿಂತ ಅವನು ಬೇರೆಯೇ ಆಗಿದ್ದಾನೆ.''

ಜನವರಿ ೧೫, ಸೋಮವಾರದ ಮಧ್ಯಾಹ್ನದಂದು ಸ್ವಾಮೀಜಿ, '೧೯ನೆಯ ಶತಮಾನದ ಒಕ್ಕೂಟ' ಎನ್ನುವ ಸಂಸ್ಥೆಯ ಆಶ್ರಯದಲ್ಲಿ ಮೆಂಫಿಸ್ ನಗರದ ತಮ್ಮ ಮೊತ್ತಮೊದಲ ಸಾರ್ವಜನಿಕ ಪ್ರವಚನವನ್ನು ನೀಡಿದರು. ಅಲ್ಲಿ ತಮ್ಮ ಭಾಷಣ ಮತ್ತು ಮಾತುಕತೆಯ ಮೂಲಕ ಸಭಿಕರ ಮನಸ್ಸನ್ನು ಅವರು ಮುದಗೊಳಿಸಿದರು. ಇದಲ್ಲದೆ ಮರುದಿನದಂದು ಸಂಜೆ ೮ ಗಂಟೆಗೆ ಸಭಾಂಗಣದಲ್ಲಿ ಪ್ರವಚನವನ್ನೂ ಮಾಡಿದರು. ಈ ಭಾಷಣದ ವರದಿಯನ್ನು ಹಲವಾರು ಪತ್ರಿಕೆಗಳು ವರದಿಮಾಡಿದವು. ಇದರ ಸಾರಾಂಶ ಹೀಗಿದೆ:

‘‘ಅಧಿಕ ಸಂಖ್ಯೆಯ ಸಭಿಕರು ಕಳೆದ ರಾತ್ರಿ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದರ ಭಾಷಣವನ್ನು ಕೇಳಿದರು. ಅವರು ಹಿಂದೂಧರ್ಮದ ಬಗ್ಗೆ ಮಾತನಾಡಿದರು. ಸ್ವಾಮೀಜಿಯವರನ್ನು ಉದಾರವಾಗಿ ಬರಮಾಡಿಕೊಳ್ಳಲಾಯಿತು. ಅವರು ಸುಂದರವಾದ ಶರೀರವುಳ್ಳವರು. ಅವರು ಕಾವಿಯ ಬಣ್ಣದ ಬಟ್ಟೆಯನ್ನು ಉಟ್ಟಿದ್ದಾರೆ. ಹಳದಿ ಬಣ್ಣದ ಪೇಟವನ್ನು ಧರಿಸಿದ್ದಾರೆ. ಅವರ ಭಾಷಣ ವಿಧಾನವು ಅತ್ಯುತ್ತಮವಾಗಿತ್ತು. ಅವರ ಇಂಗ್ಲಿಷ್ ಭಾಷೆಯ ಪ್ರಯೋಗವು ಶ್ರೇಷ್ಠ ಮಟ್ಟದ್ದಾಗಿತ್ತು. ಉಚ್ಚಾರಣೆಯು ಕೂಡ ಪರಿಪೂರ್ಣವಾಗಿತ್ತು. ಸಭಿಕರು ಇವರ ಭಾಷಣವನ್ನು ಏಕಾಗ್ರಚಿತ್ತದಿಂದ ಕೇಳಿಸಿಕೊಂಡರು.

‘‘ಸ್ವಾಮಿ ವಿವೇಕಾನಂದರು ಮುಖ್ಯವಾಗಿ ವಿಶ್ವಭ್ರಾತೃತ್ವಕ್ಕಾಗಿ ಸಭಿಕರಿಗೆ ಮನವಿಮಾಡಿಕೊಂಡರು. ಅವರ ಭಾಷಣಗಳು ಯಾವತ್ತೂ ನಕಲು ವಿಷಯಗಳಿಂದ ಕೂಡಿರಲಿಲ್ಲ. ಅಪೂರ್ವವಾದ ಚಿಂತನೆ ಮತ್ತು ವಿಶ್ವವ್ಯಾಪಕ ಉದಾರತೆಯನ್ನು ಹೊಂದಿದೆ. ಈ ವಿಷಯವನ್ನು ಅವರು ಭಾರತೀಯ ಧರ್ಮಗಳಿಗೆ ಅನ್ವಯಿಸಿದ್ದಾರೆ. ಈ ಭಾವನೆಯು ಉದಾರತನ ಮತ್ತು ಪ್ರೇಮಗಳ ಭಾವನೆಯಾಗಿದೆ. ಇದೇ ಎಲ್ಲ ಧರ್ಮಗಳ ಕೇಂದ್ರಭಾವನೆಯೂ ಆಗಿದೆ. ಹೀಗಾಗಿ ಎಲ್ಲ ಧರ್ಮಗಳೂ ಕೂಡ ಬೆಲೆಯುಳ್ಳದ್ದೇ ಆಗಿವೆ; ಸಮಾನವೇ ಆಗಿವೆ. ಪ್ರತಿಯೊಂದು ಧರ್ಮವು ಕೂಡ ಆತ್ಯಂತಿಕ ಮುಕ್ತಿಗೆ ಮಾರ್ಗವಾಗಿದೆ.

‘‘ಸ್ವಾಮಿ ವಿವೇಕಾನಂದರು ತಮ್ಮ ಧರ್ಮವನ್ನು ಹಿಂದೂಧರ್ಮಕ್ಕೆ ಮಾತ್ರ ಸೀಮಿತಗೊಳಿಸಲಿಲ್ಲ. ಎಲ್ಲ ಧರ್ಮಗಳಿಗೂ ಸಮಾನವಾದ ಭಾವನೆಯ ವಿಶ್ಲೇಷಣೆಯನ್ನು ಅವರು ಮಾಡಿದರು. ತಮ್ಮ ಧರ್ಮದಲ್ಲಿ ‘ಮೂಲಭೂತ ಪಾಪ’ ಎಂಬುದು ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಮಾನವನ ಪ್ರಗತಿಯೆಂದರೆ, ತನ್ನ ಮೂಲ ಪರಿಪೂರ್ಣತೆಗೆ ಮರಳುವುದೇ ಆಗಿದೆ. ಜಗತ್ತಿನ ಎಲ್ಲ ಕಡೆ ಶೋಷಣೆಗೆ ಒಳಗಾದ ಯಹೂದಿಗಳಿಗೆ ಆಶ್ರಯ ನೀಡಿದ್ದು ಕೇವಲ ಭಾರತ ಮಾತ್ರ ಎಂದು ಸ್ವಾಮಿ ವಿವೇಕಾನಂದರು ಸ್ಪಷ್ಟಪಡಿಸಿದರು.

‘‘ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ವಿಧಿವಿಧಾನಗಳ ಬಗ್ಗೆ ವಿವರವಾಗಿ ಮಾತನಾಡಿದರು. ಹಿಂದೂಗಳು ದೇವತಾರೂಪಗಳ ಬಗ್ಗೆ ಅಷ್ಟು ಪ್ರಾಮುಖ್ಯತೆಯನ್ನು ನೀಡುವುದಿಲ್ಲ. ಒಮ್ಮೊಮ್ಮೆ ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯೂ ಬೇರೆಬೇರೆ ಧಾರ್ಮಿಕ ಪಂಗಡಗಳಿಗೆ ಸೇರಿದವರಾಗಿರಬಹುದು. ಜಗತ್ತಿನ ಎಲ್ಲ ಧರ್ಮಗಳೂ ಸಮಾನವೇ ಎಂದು ಹಿಂದೂಗಳು ನಂಬುತ್ತಾರೆ. ಎಲ್ಲ ಧರ್ಮಗಳು ಕೂಡ ಪವಿತ್ರತೆಯ ಸ್ಫೂರ್ತಿಯ ವಿವಿಧ ಮೂರ್ತರೂಪಗಳೇ ಆಗಿವೆ. ಹಾಗೆಯೇ ಹಿಂದೂಗಳು ಆರಾಧಿಸುವ ದೇವರೂ, ಕ್ರೈಸ್ತರು ಪೂಜಿಸುವ ದೇವರೂ ಒಬ್ಬನೇ ಆಗಿದ್ದಾನೆ. ಹಿಂದೂಗಳ ದೇವರುಗಳು ಭಗವತ್ತತ್ತ್ವದ ವಿವಿಧ ದಿವ್ಯಗುಣಗಳ ಪ್ರತಿನಿಧಿಗಳು ಮಾತ್ರವೇ ಆಗಿದ್ದಾರೆ.

‘‘ಒಟ್ಟಿನಲ್ಲಿ ಇಡೀ ಪ್ರವಚನವು ಸಹೋದರ ಪ್ರೇಮಕ್ಕಾಗಿನ ವಿನಂತಿಯಾಗಿತ್ತು; ಸುಂದರ ಧರ್ಮವೊಂದರ ಪ್ರಭಾವಶಾಲಿ ವಿವರಣೆಯಾಗಿತ್ತು ಎಂದು ಹೇಳಬಹುದು. ಭಾಷಣದ ಅಂತ್ಯದಲ್ಲಿ ವಿವೇಕಾನಂದರು ತಾವು ಕೃಷ್ಣ ಮತ್ತು ಬುದ್ಧರಿಗೆ ತಲೆಬಾಗಿದಂತೆಯೇ, ಕ್ರೈಸ್ತನನ್ನೂ ಹೃತ್ಪೂರ್ವಕವಾಗಿ ಸ್ವೀಕರಿಸಲು ಸಿದ್ಧನಾಗಿದ್ದೇನೆ ಎಂದು ಒತ್ತಿಹೇಳಿದರು.’’

ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ಬಗ್ಗೆ ಮಾಡಿದ ಈ ಭವ್ಯ ಭಾಷಣವು ಹಲವಾರು ಪತ್ರಕರ್ತರ ಬರವಣಿಗೆಗಳಿಗೆ ವಿಶಿಷ್ಟ ವಸ್ತುವಾಯಿತು. ಅವರೆಲ್ಲ ಈ ಭಾಷಣದಿಂದ ಪ್ರಭಾವ ಹೊಂದಿರುವುದು ಸ್ಪಷ್ಟವಾಗಿ ಕಂಡುಬರುತ್ತಿತ್ತು.

ಮರುದಿನ ಸಂಜೆ, ಸ್ವಾಮಿ ವಿವೇಕಾನಂದರು ‘ಮಹಿಳಾ ಕೌನ್ಸಿಲ್’ ಎಂಬ ಕಟ್ಟಡದಲ್ಲಿ ‘ಮಾನವನ ಭವಿತವ್ಯ’ ಎಂಬ ವಿಷಯದ ಬಗ್ಗೆ ಮಾತನಾಡಿದರು. ಇದರ ವರದಿಯನ್ನು ‘ಅಪೀಲ್ ಅವಲಾಂಚ್’ ಎಂಬ ಪತ್ರಿಕೆಯು ಹೀಗೆ ಪ್ರಕಟಿಸಿತು:

‘‘ಸಭೆಯಲ್ಲಿ ಬಹಳಷ್ಟು ಜನ ಸೇರಿದ್ದರು. ಅವರಲ್ಲಿ ಸಾಹಿತ್ಯ ಮತ್ತು ಸಂಗೀತದಲ್ಲಿ ಪಾರಂಗತರಾದ ಹಲವಾರು ಜನ ಇದ್ದರು. ಹಾಗೆಯೇ ಪ್ರತಿಷ್ಠಿತ ವಕೀಲರು ಮತ್ತು ಆರ್ಥಿಕ ಸಂಸ್ಥೆಗಳವರೂ ಇದ್ದರು. ಒಂದು ಅಂಶದಲ್ಲಿ ಭಾಷಣಕಾರರು ಅಮೆರಿಕದ ವಕ್ತಾರರಿಗಿಂತ ಭಿನ್ನವಾಗಿದ್ದರು. ಅವರು ತಮ್ಮ ಭಾವನೆಗಳನ್ನು ಬಹಳ ತರ್ಕಬದ್ಧವಾಗಿ ಪ್ರಸ್ತುತಪಡಿಸುತ್ತಿದ್ದರು. ತಮ್ಮ ಶಕ್ತಿಯಲ್ಲಿ ಅವರಿಗೆ ತುಂಬು ವಿಶ್ವಾಸವಿತ್ತು ಹಾಗೆಯೇ ತಮ್ಮ ಅಭಿಪ್ರಾಯಗಳನ್ನು ಎಲ್ಲ ಪ್ರತಿರೋಧಗಳ ನಡುವೆಯೂ ರಕ್ಷಿಸಿಕೊಳ್ಳುವ ಸಾಮರ್ಥ್ಯವೂ ಇತ್ತು.

‘‘ಅವರು ಕ್ರೈಸ್ತಧರ್ಮದ ನಂಬಿಕೆಯಾದ ಭವಿಷ್ಯದಲ್ಲಿ ಭಗವಂತನು ಶಿಕ್ಷೆಯನ್ನು ನೀಡುತ್ತಾನೆ ಎನ್ನುವುದರಲ್ಲಿ ನಂಬಿಕೆಯನ್ನು ಇಟ್ಟಿರಲಿಲ್ಲ. ಹಾಗೆಯೇ ಅವರಿಗೆ ಭಗವಂತನ ಬಗೆಗೆ ಕ್ರೈಸ್ತಧರ್ಮದಲ್ಲಿ ಇರುವ ನಂಬಿಕೆಗಳ ಬಗ್ಗೆಯೂ ವಿಶ್ವಾಸ ಇರಲಿಲ್ಲ. ಮನಸ್ಸು ಇತರ ಸಂಗತಿಗಳ ಅಧೀನವಾಗಿದೆ. ಆದ್ದರಿಂದ ಅದು ನಿತ್ಯವೆಂದು ಅವರು ನಂಬುತ್ತಿರಲಿಲ್ಲ. ಯಾವುದು ಸಾಪೇಕ್ಷವೋ ಅದು ಎಂದಿಗೂ ಅವಿನಾಶಿಯಾಗಿರದು ಎಂದು ಅವರು ಪ್ರತಿಪಾದಿಸುತ್ತಿದ್ದರು. ಅವರು ಹೀಗೆ ಹೇಳಿದರು: ‘ಭಗವಂತನೆನ್ನುವವನು ಎಲ್ಲಿಯೋ ದೂರದಲ್ಲಿ, ವಿಶ್ವದ ಒಂದು ಮೂಲೆಯಲ್ಲಿ ಕುಳಿತು, ಜನರಿಗೆ ಬಹುಮಾನವನ್ನೋ ಇಲ್ಲವೇ ಶಿಕ್ಷೆಯನ್ನೋ ಕೊಡುವಂಥವನಲ್ಲ. ಮಾನವನು ಭಗವಂತನ ಬಗೆಗೆ ನಿಜವಾದ ಸತ್ಯವನ್ನು ಅರಿತುಕೊಳ್ಳುವ ಕಾಲವು ಇಂದಲ್ಲ ನಾಳೆ ಬಂದೇ ಬರುವುದು. ಆಗ ಅವನು ಎದ್ದುನಿಂತು ಘೋಷಿಸುವನು: ‘ನಾನೇ ದೇವರು’ ಎಂದು. ನಮ್ಮ ನೈಜ ಸ್ವಭಾವವೇ ಭಗವಂತನಾಗಿರುವಾಗ, ನಮ್ಮ ಚಿರಂತನವಾದ ತತ್ತ್ವವೇ ದೇವರಾಗಿರುವಾಗ, ದೂರದಲ್ಲಿ ಎಲ್ಲಿಯೋ ಕುಳಿತಿರುವ ಭಗವಂತನನ್ನು ಕುರಿತಾಗಿ ಏಕೆ ತಾನೇ ಉಪದೇಶ ಮಾಡಬೇಕು?’

‘‘ಮೂಲಭೂತ ಪಾಪಭಾವನೆಯನ್ನು ಉಪದೇಶಿಸುವ ನಿಮ್ಮ ಧರ್ಮದ ಬೋಧನೆಯಿಂದ ಮೋಹಗೊಳ್ಳದಿರಿ. ಏಕೆಂದರೆ ಅದೇ ಧರ್ಮವು ಮಾನವನು ಮೂಲತಃ ಪವಿತ್ರನು ಎಂದೂ ಉಪದೇಶಿಸುತ್ತದೆ. ಆಡಮ್ ಕೆಳಕ್ಕೆ ಬಿದ್ದಾಗ, ಅವನು ಬಿದ್ದದ್ದು ಪವಿತ್ರತೆಯಿಂದ. ಪವಿತ್ರತೆಯೇ ನಮ್ಮ ನಿಜವಾದ ಸ್ವರೂಪ. ಅದನ್ನು ಮತ್ತೆ ಗಳಿಸಿಕೊಳ್ಳುವುದೇ ಎಲ್ಲ ಧರ್ಮಗಳ ಏಕಮಾತ್ರ ಉದ್ದೇಶ. ಮಾನವನನ್ನು ಪಾಪಿಯೆಂದು ಕರೆಯುವುದಕ್ಕಿಂತ ನೀಚವಾದದು ಬೇರೇನೂ ಇಲ್ಲ.

‘‘ಧರ್ಮವೆಂಬುದು ಮಾನವನ ದುರ್ಬಲ ಸ್ವಭಾವದಿಂದ ಬಂದುದಲ್ಲ. ನಾವು ದೇವರೆಂಬ ಒಬ್ಬ ಕ್ರೂರಿ ಆಡಳಿತಗಾರನಿಗೆ ಹೆದರುತ್ತೇವೆಂದು ಧರ್ಮವು ಅಸ್ತಿತ್ವದಲ್ಲಿ ಇಲ್ಲ. ಧರ್ಮವೆಂದರೆ ಪ್ರೇಮ, ವಿಕಾಸ, ಬೆಳವಣಿಗೆ. ಅಜ್ಞಾನ ಮತ್ತು ಸಂಕುಚಿತತೆಗಳು ಎಂದಿಗೂ ಸತ್ಯವನ್ನು ಕಿವುಚಿಹಾಕಲಾರವು.’

‘‘ಹೀಗೆ ಭಾಷಣಕಾರರರು ತಮ್ಮ ಪ್ರತಿಪಾದನೆಯನ್ನು ಸುಮಾರು ಎರಡು ಗಂಟೆಗಳ ಕಾಲ ಮಾಡಿದರು. ಹಾಗೂ ಈ ಮಾತುಗಳಿಂದ ತಮ್ಮ ಮಾತುಗಳನ್ನು ಕೊನೆಗೊಳಿಸಿದರು: ‘ನಾವೆಲ್ಲರೂ ಸಹಾಯಮಾಡೋಣ; ನಾಶಮಾಡುವುದು ಬೇಡ.’ ’’

ತಮ್ಮ ಭಾಷಣಗಳಿಂದ ಆಕರ್ಷಿತರಾಗಿದ್ದ ಬಹಳ ಸಂಖ್ಯೆಯ ಜನರ ಬೇಡಿಕೆಯ ಮೇರೆಗೆ ಸ್ವಾಮಿ ವಿವೇಕಾನಂದರು ಇನ್ನೂ ಮೂರು ಪ್ರವಚನಗಳನ್ನು ಮೆಂಫಿಸ್ ನಗರದಲ್ಲಿ ನೀಡಿದರು. ಅವುಗಳಲ್ಲಿ ಮೊದಲ ಎರಡು ಪ್ರವಚನಗಳು ಲಾ ಸಲೆಟ್ ಅಕಾಡೆಮಿಯಲ್ಲಿ ನಡೆದವು. ಶುಕ್ರವಾರದಂದು ಸ್ವಾಮೀಜಿ ಮಾಡಿದ ಪ್ರವಚನದ ವಿಷಯವೆಂದರೆ ‘ಜನ್ಮಾಂತರ’ ಎಂದು. ಅದನ್ನು ಅಪೀಲ್ ಅವ್ಲಾಂಚ್ ಪತ್ರಿಕೆಯು ಹೀಗೆ ವರದಿಮಾಡಿತು:

‘‘ಈ ನಗರಕ್ಕೆ ಬಂದಾಗಿನಿಂದ ಸ್ವಾಮಿ ವಿವೇಕಾನಂದರ ಜನಪ್ರಿಯತೆಯು ಬಹಳಷ್ಟು ಹೆಚ್ಚಾಗಿದೆ. ಅವರು ಮಿಂಚಿನ ಹೊನಲನ್ನೇ ಜನರಲ್ಲಿ ಹಬ್ಬಿಸಿಬಿಟ್ಟಿದ್ದಾರೆ. ಅವರ ಬಗ್ಗೆ ಎಷ್ಟು ಮಾತನಾಡಿದರೂ ಜನರಿಗೆ ತೃಪ್ತಿಯೇ ಇಲ್ಲ. ಸಭಿಕರಲ್ಲಿ ಮೂರನೆಯ ಎರಡರಷ್ಟು ಮಂದಿ ಮಹಿಳೆಯರೇ. ಪೂರ್ಣ ಪ್ರವಚನವನ್ನು ಅವರು ಗಮನವಿಟ್ಟು ಕೇಳಿಸಿಕೊಳ್ಳುತ್ತಾರೆ. ವಿವೇಕಾನಂದರ ಬಾಯಿಯಿಂದ ಬರುವ ಪ್ರತಿಯೊಂದು ಪದವನ್ನೂ ಅವು ಆಳವಾದ ಸಾಗರದಲ್ಲಿ ಸಿಕ್ಕುವ ಅಮೂಲ್ಯ ರತ್ನಗಳೋ ಎನ್ನುವಂತೆ ಹೆಕ್ಕಿಕೊಳ್ಳುತ್ತಾರೆ.

‘‘ಭಾಷಣದ ವಿಷಯ ‘ಜೀವಿಯ ಪುನರ್ಜನ್ಮ’ ಎಂಬುದಾಗಿತ್ತು. ಸ್ವಾಮಿ ವಿವೇಕಾನಂದರು ಈ ವಿಷಯದ ಬಗ್ಗೆ ಮಾತನಾಡಲು ಎಲ್ಲರಿಗಿಂತ ಅರ್ಹರಾಗಿದ್ದರು ಎಂದೇ ಹೇಳಬಹುದು. ಪುನರ್ಜನ್ಮವೆನ್ನುವುದು ಪೂರ್ವದೇಶಗಳ ಜನರು ವ್ಯಾಪಕವಾಗಿ ನಂಬುವ ವಿಷಯ. ಅದನ್ನು ಅವರು ಜಾಗತಿಕ ವೇದಿಕೆಗಳಲ್ಲಿ ಬಹಳವೇ ಸಮರ್ಥಿಸಿಕೊಳ್ಳುತ್ತಾರೆ. ಈ ಬಗ್ಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದರು:

‘‘ಪುನರ್ಜನ್ಮವು ಪ್ರಾಚೀನ ಧರ್ಮಗಳೆಲ್ಲದರ ಅತ್ಯಂತ ಪುರಾತನ ಭಾವನೆ ಎನ್ನುವುದು ನಿಮ್ಮಲ್ಲಿ ಬಹಳಷ್ಟು ಮಂದಿಗೆ ಗೊತ್ತಿರದೇ ಇರಬಹುದು. ಪುನರ್ಜನ್ಮ ಸಿದ್ಧಾಂತವು ಪರ್ಷಿಯನ್ನರಲ್ಲಿ, ಯಹೂದಿಗಳಲ್ಲಿ, ಅಷ್ಟು ಮಾತ್ರವಲ್ಲ ಕ್ರೈಸ್ತ ಚರ್ಚಿನ ಮೊದಲ ಸಂನ್ಯಾಸಿಗಳಲ್ಲಿ ಕೂಡ ಪ್ರಚಲಿತವಾಗಿತ್ತು. ಹಾಗೆಯೇ ಅರಬರಲ್ಲಿಯೂ ಇದು ಕಂಡುಬಂದಿದೆ. ಆದರೆ ಕೇವಲ ಹಿಂದೂಗಳು ಮತ್ತು ಬೌದ್ಧರು ಇನ್ನೂ ಈ ನಂಬಿಕೆಯನ್ನು ಉಳಿಸಿಕೊಂಡಿದ್ದಾರೆ.

‘‘ಈ ನಂಬಿಕೆಯು ವಿಜ್ಞಾನಯುಗದವರೆಗೂ ಬೆಳೆದುಕೊಂಡು ಬಂದಿತ್ತು. ಆದರೆ ಪಾಶ್ಚಾತ್ಯ ಜನರಾದ ನೀವು ಇದನ್ನು ಅನೈತಿಕ ಸಿದ್ಧಾಂತ ಎಂದು ಭಾವಿಸುತ್ತೀರಿ. ಇದನ್ನು ವಿಶ್ಲೇಷಿಸಲು, ನಾವು ಇದರ ತಾರ್ಕಿಕ ಮತ್ತು ತಾತ್ತ್ವಿಕ ಅಂಶಗಳನ್ನೆಲ್ಲ ಪರಿಗಣಿಸಬೇಕಾಗುತ್ತದೆ. ಈ ಜಗತ್ತನ್ನು ಆಳುವ ಈಶ್ವರನೊಬ್ಬನಿದ್ದಾನೆ ಎಂದು ನಾವೆಲ್ಲ ನಂಬುತ್ತೇವೆ. ಆದರೂ ಜಗತ್ತಿನಲ್ಲಿ ನಾವು ಕಾಣುವುದು ಅನ್ಯಾಯವನ್ನೇ, ನ್ಯಾಯವನ್ನಲ್ಲ. ಒಬ್ಬನು ಬಹಳ ಉತ್ತಮ ಪರಿಸ್ಥಿತಿಯಲ್ಲಿ ಜನ್ಮ ತಳೆಯುತ್ತಾನೆ. ಜೀವನದುದ್ದಕ್ಕೂ ಅವನಿಗೆ ಎಲ್ಲ ಪರಿಸ್ಥಿತಿಗಳೂ ಅನುಕೂಲಕರವಾಗಿಯೇ ಇರುತ್ತವೆ; ಸುಖವನ್ನು ತರುತ್ತವೆ. ಆದರೆ ಇನ್ನೊಬ್ಬನು ತನ್ನ ಸಹವರ್ತಿಗಿಂತ ಭಿನ್ನ ಪರಿಸ್ಥಿತಿಯಲ್ಲಿ ಜನ್ಮತಳೆಯುತ್ತಾನೆ. ಪರಿಸ್ಥಿತಿಗಳು ಯಾವತ್ತೂ ಅವನಿಗೆ ಕಷ್ಟಕರವಾಗಿರುತ್ತವೆ. ಅವನು ಸಮಾಜದಿಂದ ತಿರಸ್ಕರಿಸಲ್ಪಟ್ಟು, ಖಿನ್ನನಾಗಿ ಸಾಯುತ್ತಾನೆ. ಸಂತೋಷದ ಹಂಚಿಕೆಯಲ್ಲಿ ಏಕೆ ತಾನೇ ಈ ತಾರತಮ್ಯ?

‘‘ಜನ್ಮಾಂತರದ ಸಿದ್ಧಾಂತವು ನಿಮ್ಮಲ್ಲಿರುವ ಸಾಮಾನ್ಯ ನಂಬಿಕೆಗಳ ವೈಪರೀತ್ಯವನ್ನು ಸಮನ್ವಯ ಮಾಡಲು ಪ್ರಯತ್ನಿಸುತ್ತದೆ. ನಮ್ಮನ್ನು ಅನೈತಿಕರನ್ನಾಗಿ ಮಾಡದೆಯೇ, ಈ ಸಿದ್ಧಾಂತವು ನಮಗೆ ನ್ಯಾಯನಿರ್ಧಾರದ ಭಾವನೆಯನ್ನು ನೀಡುತ್ತದೆ. ಕೆಲವರು ಇದು ‘ಭಗವಂತನ ಇಚ್ಛೆ’ ಎಂದು ಹೇಳುತ್ತಾರೆ. ಆದರೆ ಇದು ಅವೈಜ್ಞಾನಿಕ. ಎಲ್ಲಕ್ಕೂ ಒಂದು ಕಾರಣವಿದ್ದೇ ಇರುತ್ತದೆ. ಕಾರ್ಯಕಾರಣವನ್ನು ಭಗವಂತನಿಗೇ ಬಿಟ್ಟುಕೊಟ್ಟರೆ, ಅವನು ಅನೈತಿಕ ವ್ಯಕ್ತಿಯಾಗಿಬಿಡುತ್ತಾನೆ. (ಆದ್ದರಿಂದ ಜೀವಿಗಳ ಕರ್ಮಫಲದ ವಿಷಯದಲ್ಲಿ ಭಗವಂತನ ಪಾತ್ರವೇನೂ ಇಲ್ಲ).

‘‘ಈ ಸಿದ್ಧಾಂತದಲ್ಲಿ ಇನ್ನೊಂದು ಸುಂದರವಾದ ಅಂಶವಿದೆ. ಇದು ಒಳ್ಳೆಯದನ್ನು ಮಾಡುವುದಕ್ಕೆ ಪ್ರೇರಣೆಯನ್ನು ಒದಗಿಸುತ್ತದೆ. ಪ್ರತಿಯೊಂದು ಕ್ಷಣವೂ ನಾವು ನೂತನ ಆಯ್ಕೆಗಳನ್ನು ಮಾಡಿಕೊಳ್ಳುವ ಸುಸಂದರ್ಭ ಎಂಬ ಅರಿವನ್ನು ನಮಗೆ ಮಾಡಿಕೊಡುತ್ತದೆ. ’’

*(ಮುಂದುವರಿಯುವುದು)*